'ಫೋಟೊ ತೆಗೀಬಾರದು ಅಂತ ನಮ್ಮ ಗುಂಪಲ್ಲಿ ನಿರ್ಧರಿಸಿದ್ವಿ. ಹಾಗಾಗಿ ಫೋಟೊ ಇಲ್ಲ ಅತ್ತೆ. ಆದರೆ ಅವರ್ನ ನೋಡಿದ್ದೇನೆ. ಬೆಳ್ಳಗೆ, ಎತ್ತರವಾಗಿ ಜೋರಾಗಿ ಇದ್ದಾರೆ. ನಮ್ಮ ಮದುವೆಗೆ ಬಂದಿದ್ರು ಅತ್ತೆ...'

ಲಟ್ಟಣಿಗೆಯಿಂದ ಕಲಿಸಿದ ಹಿಟ್ಟಿನ ಮೇಲೆ ಪಟಪಟ ಹೊಡೆದೆ. ಸಂಜೆ ಬಂದಾಗಿನಿಂದ ಅದೇ ಮಾತು ಸೌಮ್ಯಳದು. ಮೆಲ್ಲನೆ ತಲೆಯಾಡಿಸಿದೆ.

'ಯಾರು ಅಂತ ಗೊತ್ತಾಯ್ತಾ ಅತ್ತೆ? ನಾನು ಬಂದಾಗಿನಿಂದ ಹೇಳ್ತಾ ಇದೀನಿ... ನೀವು ಸುಮ್ಮನೆ ತಲೆ ಆಡಿಸ್ತಾ ಇದ್ದೀರಿ...'

ಲಟ್ಟಣಿಗೆ ಪಕ್ಕಕ್ಕಿಟ್ಟು ಹಿಟ್ಟನ್ನು ಕೈಯಲ್ಲಿ ನಾದತೊಡಗಿದೆ.

'ಯಾರಿರಬಹುದು ಅಂತ ತೋಚ್ತಾ ಇಲ್ಲ ಸೌಮ್ಯ. ನಮ್ಮ ಬಳಗದ ಪೈಕಿ, ಸ್ನೇಹಿತರ ಪೈಕಿ ಯಾರೂ ವೃದ್ಧಾಶ್ರಮಕ್ಕೆ ಸೇರಿಕೊಂಡಿಲ್ಲ.'

'ಇದು ದುಡ್ಡು ಕಾಸು ಇರೋರು ಇರೋ ಆಶ್ರಮ ಅತ್ತೆ, ಗತಿಯಿಲ್ಲದೆ ಅಲ್ಲಿದ್ದಾರೆ ಅಂತಲ್ಲ... ಚಪಾತಿಗೆ ನಾನು ಲಟ್ಟಿಸ್ಲಾ?'

ಪ್ರತಿ ವಾಕ್ಯಕ್ಕೂ ಅತ್ತೆ ಅತ್ತೆ ಎಂದು ಉಲಿಯುವ ಮುದ್ದು ಸೊಸೆಯತ್ತ ನೋಡಿ ಮುಗುಳ್ನಕ್ಕೆ.

'ನಾನು ಮಾಡ್ತೀನಿ. ನಿಮ್ಮೂರಲ್ಲಿ ನೀನು ಮಾಡೋದು ಇದ್ದೇ ಇರುತ್ತೆ...'

ನಾದಿದ ಹಿಟ್ಟನ್ನು ಉದ್ದಕ್ಕೆ ಮಾಡಿ, ಎಂಟು ಸಮ ಭಾಗದ ಉಂಡೆಗಳನ್ನು ಮಾಡಿ, ಗೋಧಿ ಹಿಟ್ಟಿನಲ್ಲಿ ಅದ್ದಿ ತಟ್ಟೆಯ ಪಕ್ಕಕ್ಕಿಟ್ಟು, ಮಣೆಯ ಮೇಲೆ ಒಂದು ಉಂಡೆಯನ್ನು ಇಟ್ಟು ಲಟ್ಟಿಸಲಾರಂಭಿಸಿದೆ.

'ಕಾವಲಿ ಒಲೆಯ ಮೇಲೆ ಇಟ್ಟು, ಗ್ಯಾಸ್ ಆನ್ ಮಾಡಮ್ಮ...'

'ಅತ್ತೇ... ನಿಮಗೆ ಕುತೂಹಲವೇ ಇಲ್ಲವೇ? ಅವರು ನಿಮಗೆ ಗೊತ್ತಿರೋರು ಅತ್ತೆ... ನನ್ನ, ವಿವೇಕನ ಮದುವೆಗೆ ಬಂದಿದ್ದು...'

'ಮೂರು ವರ್ಷ ಆಯ್ತು ನಿನ್ನ ಮದುವೆಯಾಗಿ! ಇನ್ನೂ ಮದುವೆಗೆ ಯಾರ್‍ಯಾರು ಬಂದಿದ್ರು ಅಂತ ಮದುವಣಗಿತ್ತಿಯಾದ ನಿನಗೆ ನೆನಪಿರುತ್ತಾ? ಅವರು ನಮ್ಮ ಮನೆಗೆ ಬಂದಿದ್ರಾ?'

ನಾನೇ ಕಾವಲಿಯಿಟ್ಟು. ಒಲೆ ಹೊತ್ತಿಸಿದೆ. ಗುಂಡಗೆ ಲಟ್ಟಿಸಿದ ಹಿಟ್ಟಿನ ಹಾಳೆಗೆ ಅರ್ಧ ಚಮಚ ಎಣ್ಣೆ ಹಾಕಿ, ಮಡಚಿ, ತ್ರಿಕೋನವಾಗಿ ಮಾಡಿ ಪಕ್ಕಕ್ಕೆ ಇಟ್ಟು, ಮತ್ತೊಂದು ಉಂಡೆ ತೆಗೆದುಕೊಂಡು ಲಟ್ಟಿಸಲಾರಂಭಿಸಿದೆ.

'ಬಂದಿರಬಹುದು, ನಂಗೆ ಗೊತ್ತಿಲ್ಲ. ಆಕೇನೂ ನನ್ನ ಪರಿಚಯ ಇರುವವರಂತೆ ನಕ್ಕರು. ನಂತರ ಸುಮ್ಮನಾಗಿ ಬಿಟ್ರು. ನನಗೆ ತೋಚಿ, ಅವರನ್ನು ಮಾತನಾಡಿಸುವ ಎಂದು ನೋಡಿದರೆ, ಕೋಣೆಗೆ ಹೋಗಿ ಮಲಗಿಬಿಟ್ಟಿದ್ರು. ಊಟ ಕೂಡ ಮಾಡಲಿಲ್ಲ...'

'ಹೂಂ... ಸುಮ್ಮನೆ ನಕ್ಕಿರ್ತಾರೆ... ನಂಗೆ ಗೊತ್ತಿರೋ ಪೈಕಿ ಯಾರೂ ವೃದ್ಧಾಶ್ರಮದಲ್ಲಿ ಇಲ್ಲ. ಸೌಮ್ಯ, ಈಗ ತಟ್ಟೆ ಹಾಕಿ ವಿವೇಕನ್ನ ಕರಿ.'

'ಸುಮ್ಮನೆ ನಕ್ಕಿದ್ದಲ್ಲಾ... ಪರಿಚಯದ ನಗುವೇ ಆದರೆ ಗೊತ್ತಾಗಬಾರದು ಅಂತ ಒಳಗೆ ಹೋಗಿ ಮಲಗಿಬಿಟ್ಟರು... ನಾನು ಯಾರು ಅಂತ ಅವರಿಗೆ ಗೊತ್ತಾಯಿತು ಅನ್ನಿಸುತ್ತೆ... ಅದಕ್ಕೆ ಮುಂದೆ ಮಾತನಾಡಲಿಲ್ಲ...'

'ಹೋಗ್ಲಿ ಬಿಡು... ನೀನು ಮೊದಲು ವಿವೇಕನ್ನ ಕರಿ... ಹಾಟ್‌ಬಾಕ್ಸಿನಲ್ಲಿ ಸಾಗು ಇದೆ